ಶ್ರೀ ಕೆ. ರುಕ್ಕಯ್ಯ ಪೂಜಾರಿ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾಜಿ ಕಾರ್ಯದರ್ಶಿ ಹಾಗೂ ಇಬ್ಬರು ಮಾರಾಟ ಗುಮಾಸ್ತರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆಯೆಂದು ಹೇಳಿದ್ದಾರೆ. ಹಾಗೂ ಸಂಘದ ಅಧ್ಯಕ್ಷ ಶ್ರೀ ಎಚ್. ಶಂಕರನಾರಾಯಣ ಭಟ್ ಅವರನ್ನು ಆಡಳಿತ ಮಂಡಳಿಯ ಸದಸ್ಯತ್ವದಿಂದ ಅನರ್ಹತೆಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ ಇಲ್ಲಿ ಅವ್ಯವಹಾರ ನಡೆದಿರುವುದಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಶಂಕರನಾರಾಯಣ ಭಟ್ ಅವರೇ ಪೂರ್ಣ ಜವಾಬ್ದಾರರು ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಆದರೆ ಇವರ ಮೇಲೆ ಕ್ರಮ ತೆಗೆದುಕೊಳ್ಳದೇ ಮಾಜಿ ಕಾರ್ಯದರ್ಶಿ ಹಾಗೂ ಇಬ್ಬರು ಮಾರಾಟ ಗುಮಾಸ್ತರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿದ್ದು, ಶಂಕರನಾರಾಯಣ ಭಟ್ ಅವರನ್ನು ಆಡಳಿತ ಮಂಡಲಿಯ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಆದುದರಿಂದ ಶಂಕರನಾರಾಯಣ ಭಟ್ಟರ ಮೇಲೆ ಮೊಕದ್ದಮೆ ಹೂಡುವಂಥ ಆಲೋಚನೆ ಸರ್ಕಾರಕ್ಕೆ ಇದೆಯೇ ? ಇಷ್ಟು ಅವ್ಯವಸ್ಥೆ ನಡೆದಿದ್ದರೂ ಆಡಳಿತ ಮಂಡಳಿಯನ್ನು ಏತಕ್ಕೆ ಬರಖಾಸ್ತುಗೊಳಿಸಿಲ್ಲ ?

ಶ್ರೀ ಆರ್. ಎಲ್. ಜಾಲಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಸಹಕಾರ ಸಂಘಗಳಲ್ಲಿ ಇದು ಆಗಿದೆ, ಸನ್ಮಾನ್ಯ ಸದಸ್ಯರಿಗೂ ಇದು ಗೊತ್ತಿದೆ. ಸೀನಾಡಿ, ಕೋಯಂಬೂರು ಸಹಕಾರ ಸಂಘಗಳಲ್ಲಿಯೂ ಆಗಿದೆ. ಅಧ್ಯಕ್ಷರನ್ನು ನಿವೃತ್ತಿ ಮಾಡಿದರೆ ಜವಾಬ್ದಾರಿ ಮುಗಿಯುವುದಿಲ್ಲ. ಇದು ೧೯೮೧ನೇ ಇಸವಿಯಲ್ಲಿ ನಡೆದಿದೆ. ೩–೪ ಸಹಕಾರ ಸಂಘಗಳಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆ ಜಿಲ್ಲಾ ಕೇಂದ್ರ ಬ್ಯಾಂಕು ಸರಿಯಾದ ಉಸ್ತುವಾರಿ ನಡೆಸಿಲ್ಲವೆಂದು ನನ್ನ ಅನಿಸಿಕೆ. ಸಹಕಾರ ಸಂಘವನ್ನು ಸೂಪರ್ ಸೀಡ್ ಮಾಡಿದರೂ, ಹೈಕೋರ್ಟಿನಿಂದ ಸ್ಟೇ ಆರ್ಡರ್ ತಂದಿದ್ದಾರೆ. ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡಿ, ಯಾರ ಯಾರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುವುದು. ಜೊತೆಗೆ ಜಿಲ್ಲಾ ಕೇಂದ್ರ ಬ್ಯಾಂಕ್ ಕರ್ತವ್ಯ ಲೋಪ ಮಾಡಿದ್ದರೆ ಅದನ್ನು ಕೂಡ ಪರಿಶೀಲನೆ ಮಾಡಲಾಗುವುದು.

ಬೆಂಗಳೂರಿನ ಹೊಸ ತರಗುಪೇಟೆಯಲ್ಲಿರುವ ಮಾರುಕಟ್ಟೆಯನ್ನು ಯಶವಂತಪುರಕ್ಕೆ ಸ್ಥಳಾಂತರಿಸುವುದು.

೨೭೩. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯವರು ಹೊಸ ತರಗುಪೇಟೆಯಲ್ಲಿರುವ ಮಾರುಕಟ್ಟೆಯನ್ನು ಬೆಂಗಳೂರಿನ ಯಶವಂತಪುರದ ಮಾರುಕಟ್ಟೆ ಆವರಣಕ್ಕೆ ಸ್ಥಳಾಂತರಿಸಲು ಕೈಗೊಂಡ ಕ್ರಮಗಳೇನು ?

ಆ) ಇನ್ನು ಕೆಲ ವ್ಯಾಪಾರಿಗಳು ಹೊಸ ತರಗುಪೇಟೆಯಲ್ಲಿ ವ್ಯಾಪಾರ ನಡೆಸುತ್ತಿರುವುದು ನಿಜವೇ ?

ಇ) ಮಾರುಕಟ್ಟೆಯನ್ನು ಪೂರ್ತಿಯಾಗಿ ಸ್ಥಳಾಂತರಿಸಿ ಅಲ್ಲಿ ವ್ಯಾಪಾರ ನಡೆಸಲು ಸರ್ಕಾರದವರ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—

ಬೆಂಗಳೂರು ಮಾರುಕಟ್ಟೆ ಸಮಿತಿಯು ಯಶವಂತಪುರದಲ್ಲಿ ಅಂದಾಜು ೮೨ ಎಕರೆ ಭೂಮಿಯನ್ನು ಮಾರುಕಟ್ಟೆ ಪ್ರಾಂಗಣವನ್ನು ಸ್ಥಾಪಿಸುವ ಸಲುವಾಗಿ ಬೆಂಗಳೂರು ನಗರಾಭಿವೃದ್ಧಿ ಮಂಡಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪಡೆದುಕೊಂಡು ಅಲ್ಲಿ ೬೮೫ ನಿವೇಶನಗಳನ್ನು ವಿಂಗಡಿಸಿ ಅವುಗಳಲ್ಲಿ ಈಗಾಗಲೇ ೪೫೨ ನಿವೇಶನಗಳನ್ನು ವ್ಯಾಪಾರಸ್ಥರಿಗೆ ಹಂಚಲಾಗಿದೆ. ಸಮಿತಿ ವಶದಲ್ಲಿದ್ದ ಖಾಲಿ ಪ್ರದೇಶದಲ್ಲಿ ೮೦ ತಾತ್ಕಾಲಿಕ ಶೆಡ್ಡುಗಳನ್ನು ಹಾಕಿದ್ದು ಅವನ್ನು ಕೇಳಿಕೊಂಡ ವ್ಯಾಪಾರಿಗಳಿಗೆ ಹಂಚಲಾಗಿದೆ. ಹಾಗೂ

ರೈತ ಭವನದಲ್ಲಿ ಕಟ್ಟಿಸಿದ ಅಂಗಡಿಗಳನ್ನು, ಅರ್ಜಿ ಮಾಡಿಕೊಂಡ ವ್ಯಾಪಾರಿಗಳಿಗೆ ಹಂಚಲಾಗಿದೆ. ಇವೆಲ್ಲವನ್ನು ವ್ಯಾಪಾರಿಗಳು ಶೀಘ್ರವಾಗಿ ಹೊಸ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರವನ್ನು ಪ್ರಾರಂಭಿಸಲು ಅನುಕೂಲವಾಗುವ ಸಲುವಾಗಿ ಕೈಗೊಳ್ಳಲಾಯಿತು. ಅಲ್ಲದೇ ಈ ಕೆಳಗೆ ಕಾಣಿಸಿದ ಸೌಲಭ್ಯಗಳನ್ನು ಸಹ ಒದಗಿಸಲಾಯಿತು.

೧) ಅಂಗಡಿ ಮತ್ತು ಗುದಾಮುಗಳನ್ನು ಕಟ್ಟಿಸಲು ಸಾಲದ ರೂಪದಲ್ಲಿ ಧನ ಸಹಾಯ ಮಾಡುವುದು.

೨) ತಾತ್ಕಾಲಿಕ ಅಂಗಡಿಗಳನ್ನು ಕಟ್ಟಲು ಸಾಲದ ರೂಪದಲ್ಲಿ ಸಿಮೆಂಟು ಎ.ಸಿ. ಸೀಟುಗಳನ್ನು ಹಂಚುವುದು.

ಆ) ಕೆಲವು ಚಿಲ್ಲರೆ ಮಾರಾಟದ ವ್ಯಾಪಾರಿಗಳು ಹೊಸ ತರಗುಪೇಟೆಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ.

ಇ) ಸಗಟು ವ್ಯಾಪಾರಿಗಳನ್ನು ಎಲ್ಲಾ ಪೂರ್ತಿಯಾಗಿ ಮಾರುಕಟ್ಟೆಗೆ ಸ್ಥಳಾಂತರಿಸಿದೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಯಶವಂತಪುರದಲ್ಲಿ ವ್ಯಾಪಾರ ಮಳಿಗೆಗಳನ್ನು ಕಟ್ಟಿದರೂ ತರಗುಪೇಟೆಯಲ್ಲಿಯೇ ವ್ಯಾಪಾರ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ? ಅಲ್ಲಿಂದ ತಪ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ? ತರಗುಪೇಟೆ ಆವರಣವನ್ನು ಸಾರ್ವಜನಿಕ ಉಪಯೋಗಕ್ಕಾಗಿ ಇಡಲು ಏನು ಕ್ರಮ ಕೈಗೊಂಡಿದ್ದೀರಿ ? ಸರ್ಕಾರಕ್ಕೆ ಪ್ರಭಾವ ಬೀರಿ ಹಣದ ಉಪಯೋಗ ನಡೆದಿದೆ ಎಂಬ ಸುದ್ದಿ ಇವೆ, ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಅಧಿಕಾರಕ್ಕೆ ಬಂದಮೇಲೆ ಆಹಾರ ಇಲಾಖೆಯ ಅಧಿಕಾರಿಗಳನ್ನು ಕರೆಸಿ ತರಗುಪೇಟೆಯಲ್ಲಿ ಚಿಲ್ಲರೆ ವ್ಯಾಪಾರ ಮಾಡುವುದಕ್ಕೆ ಅವಕಾಶ ಕೊಟ್ಟಿರುವ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿದೆ. ಇದರಿಂದ ಅನಾಹುತವಾಗುತ್ತದೆ. ಮಾರುಕಟ್ಟೆ ಸೆಸ್ ಕದಿಯುವುದಕ್ಕೆ ಅವಕಾಶವಾಗುತ್ತದೆ. ಹಳೇ ತರಗುಪೇಟೆಯಲ್ಲಾಗಲೀ ಹೊಸ ತರಗುಪೇಟೆಯಲ್ಲಾಗಲೀ ಕೊಡಬಾರದೆಂದು ಹೇಳಿದರು. ಜಾಯಿಂಟ್ ಡೈರೆಕ್ಟರ್‌ರವರುಗಳು ಜನಕ್ಕೆ ಕೊಟ್ಟಿದ್ದಾರೆ. ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಜಾಯಿಂಟ್ ಡೈರೆಕ್ಟರ್ ರವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದ್ದರೂ ದುರಾದೃಷ್ಟವಶಾತ್ ಟ್ರಾನ್ಸ್‌ಫರ್ ಆಗಿಲ್ಲ. ಕೆಲವು ಅಂಗಡಿಗಳ ಮೇಲೆ ರೈಡ್ ಮಾಡಿ, ೧೦೦ ಚೀಲ ೮೦ ಚೀಲ ಇಟ್ಟಿದ್ದವರ ಮೇಲೆ ಕೇಸುಗಳನ್ನು ಬುಕ್ ಮಾಡಿದ್ದೇವೆ. ಕೆಲವು ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಿದಾಗ, ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ.

ಶ್ರೀ ಬಿ. ಸ್ವಾಮಿ ರಾವ್.—ಎರಡೂ ಕಡೆಯು ವ್ಯವಹಾರ ನಡೆಸುತ್ತಿದ್ದಾರೆಂದು ಗೊತ್ತಿದೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಆರ್ ಎಲ್. ಜಾಲಪ್ಪ.—ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಚಿಲ್ಲರೆ ಮಾರಾಟದ ಹೆಸರಿನಲ್ಲಿ ಹೋಲ್‌ಸೇಲ್ ವ್ಯಾಪಾರ ಮಾಡುತ್ತಿದ್ದಾರೆಂದು ಗಮನಕ್ಕೆ ಬಂದಿದೆ. ಕೆಲವು ಜನರ ಮೇಲೆ ಕೇಸುಗಳನ್ನು ಹಾಕಿದ್ದೇವೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಯಶವಂತಪುರ ಮಾರುಕಟ್ಟೆ ಆವರಣದಲ್ಲಿ ಎಷ್ಟು ಜನರಿಗೆ ಪ್ಲಾಟುಗಳನ್ನು ಹಂಚಿದ್ದೀರಿ ? ಬೇರೆಯವರ ಹೆಸರಿನಲ್ಲಿ ಎಷ್ಟು ಜನ ವ್ಯಾಪಾರ ಮಾಡುತ್ತಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಅಂಕಿ ಸಂಖ್ಯೆಗಳು ನನ್ನಲ್ಲಿ ಇಲ್ಲ. ೧೨–೧೪ ಜನ ವ್ಯಾಪಾರಸ್ಥರು ಬೇರೆಯವರ ಹೆಸರಿನಲ್ಲಿರುವ ಲೈಸೆನ್ಸ್ ಉಪಯೋಗಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಅದರ ಬಗ್ಗೆ ವಿಚಾರ ಮಾಡಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಂತ್ರಿಗಳ ಉತ್ತರದಿಂದ ನಿರಾಶಭಾವನೆ ಕಂಡುಬರುತ್ತದೆ. ಈ ವಿಷಯವನ್ನು ಮಂತ್ರಿಮಂಡಲದ ಮುಂದೆ ಇಟ್ಟು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಆರ್. ಎಲ್. ಜಾಲಪ್ಪ.—ಇದು ಬಹಳ ಗಹನವಾದುದು ಎಂದು ನಾನು ಮೊದಲು ವಿಚಾರ ಮಾಡಲಿಲ್ಲ. ಕಳೆದ ಕೆಲವು ದಿವಸಗಳಿಂದ ಗಹನವಾದ ವಿಚಾರವೆಂದು ಗಮನಕ್ಕೆ ಬಂತು. ಮಂತ್ರಿ ಮಂಡಲದ ಮುಂದೆ ಇಡಬೇಕಾಗಿಲ್ಲ. ಆದರೂ ಮಂತ್ರಿ ಮಂಡಲದ ಮುಂದೆ ಇಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

೨೭೧. ಸದಸ್ಯರು ಗೈರು ಹಾಜರಿ.

ಗುಲ್ಬರ್ಗ ಜಿಲ್ಲೆಯ ಆಳಂದ ಟೌನಿನ ಕೊಳಚೆ ಪ್ರದೇಶಕ್ಕೆ ಮೂಲ ನಾಗರೀಕ ಸೌಲಭ್ಯಗಳನ್ನು ಒದಗಿಸುವುದು

೨೭೧. ಶ್ರೀ ಬಿ. ಆರ್. ಪಾಟೀಲ್ (ಆಲಂದ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗ ಜಿಲ್ಲೆಯ ಆಳಂದ ಪಟ್ಟಣದಲ್ಲಿಯ ಕೊಳಚೆ ಪ್ರದೇಶ ನಿವಾಸಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ಆಳಂದ ಪಟ್ಟಣದಲ್ಲಿ ಈವರೆಗೆ ನೀಡಲಾದ ಮೂಲಭೂತ ಸೌಕರ್ಯ ಒದಗಿಸಿರುವುದರ ಪ್ರಗತಿ ಮತ್ತು ಇನ್ನು ಮುಂದೆ ತೆಗೆದುಕೊಳ್ಳಬೇಕಾದ ಅಭಿವೃದ್ಧಿ ಯೋಜನೆಗಳಾವುವು ?

ಇ) ಹೈದರಾಬಾದ್-ಕರ್ನಾಟಕದ ಬೀದರ್, ಗುಲ್ಬರ್ಗ, ರಾಯಚೂರು, ಜಿಲ್ಲೆಗಳಲ್ಲಿ ಕೊಳಚೆ ನಿರ್ಮೂಲನ ಮತ್ತು ನಿವಾಸಿಗಳ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ನಿರ್ಲಕ್ಷಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು)

ಅ) ಗುಲ್ಬರ್ಗ ಜಿಲ್ಲೆಯ ಆಳಂದ ಪಟ್ಟಣದ ಮಂಗಳವಾಡ ಕೊಳಚೆ ಪ್ರದೇಶದ ನಿವಾಸಿಗಳಿಗೆ ೯೦,೦೦೦ ರೂ. ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ೧೯೮೩-೮೪ನೇ ಸಾಲಿನಲ್ಲಿ ಯೋಜಿಸಲಾಗಿದೆ.

ಆ) ಆಳಂದ ಪಟ್ಟಣದ ಮಂಗಳವಾಡ ಕೊಳಚೆ ಪ್ರದೇಶಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಅಂದಾಜು ಪಟ್ಟಿ ತಯಾರಾಗಿದ್ದು, ಟೆಂಡರೂ ಕೂಡ ಕರೆಯಲಾಗಿದೆ. ಆದರೆ ಕೆಲಸ ವಹಿಸಿಕೊಳ್ಳಲು ಯಾವ ಗುತ್ತಿಗೆದಾರರೂ ಮುಂದೆ ಬಂದಿರುವುದಿಲ್ಲ.

ಇ) ಇಲ್ಲ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಕೃಷ್ಣ ರಾಜನಗರದ ಒಳಚರಂಡಿ ವ್ಯವಸ್ಥೆಯ ಬಗ್ಗೆ

೨೪೦. ಶ್ರೀ ಎಚ್. ನಂಜಪ್ಪ (ಕೃಷ್ಣರಾಜ ನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕೃಷ್ಣರಾಜನಗರಕ್ಕೆ ಒಳಚರಂಡಿ ಮಂಜೂರಾತಿ ಬಗ್ಗೆ ಲೈನ್ ಎಸ್ಟಿಮೇಟ್ ಆಗಿ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ಸರ್ಕಾರದವರ ಆದೇಶಕ್ಕೆ ಮತ್ತು ಮಂಜೂರಾತಿಗೆ ಶಿಫಾರಸ್ ಪತ್ರ ದಿನಾಂಕ ೮-೧೨-೮೨ರಂದು ಬಂದಿರುವುದು ನಿಜವೇ ?

ಆ) ಸರ್ಕಾರವು ಮಂಜೂರಾತಿ ಬಗ್ಗೆ ನಿರ್ಣಯ ತೆಗೆದುಕೊಂಡಿದೆಯೇ ?

ಇ) ಹಾಗಿದಲ್ಲಿ ಕೆಲಸ ಯಾವಾಗ ಪ್ರಾರಂಭವಾಗುವುದು,